ದಿನಾಂಕ 29-01-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ವಾದಿಗಳ ಪರ ಶ್ರೀ ಪಿ ಬಿ ಎ ವಕೀಲರಿಂದ.

ನಾನು ಹಳಿಯಾಳದ ಇಂದಿರಾ ನಗರದಲ್ಲಿ ವಾಸ ವಿರುತ್ತೇನೆ. ಅಸಲು ದಾವಾ ಸಂಖ್ಯೆ 172/2018 ಅನ್ನು ಹೂಡಿದ್ದು ಅದು ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಅದರಲ್ಲಿ ಪ್ರತಿವಾದಿ 2 ಮತ್ತು 3 ರವರು ಪ್ರತಿವಾದಿ 1 ಮತ್ತು 2 ಎಂದು ಪಕ್ಷಗಾರರಾಗಿದ್ದಾರೆ ಎಂದರೆ ಸರಿ. ವಾದಿ ಅಸಲು ದಾವಾ ಸಂಖ್ಯೆ 172/2018 ರಲ್ಲಿ ಪ್ರತಿವಾದಿ 3 ಎಂದು ಸೇರ್ಪಡೆಯಾಗಿದ್ದಾರೆ ಎಂದರೆ ಸರಿ. ವಾದಿ ಹಿರಿಯ ಸಿವಿಲ್ ನ್ಯಾಯಾಲಯ ಹಳಿಯಾಳದಲ್ಲಿ ಅಸಲು ದಾವಾ ಸಂಖ್ಯೆ 13/2021 ಅನ್ನು ಪಾಲುವಾಟ್ನಿಗಾಗಿ ಹೂಡಿದ್ದಾರೆ ಎಂದರೆ ಸರಿ. ಆ ದಾವೆಯಲ್ಲಿ ನಾನು 13 ನೇ ಪ್ರತಿವಾದಿ ಇದ್ದು, ಒಟ್ಟು 41 ಜನ ಪ್ರತಿವಾದಿಯರು ಇದ್ದಾರೆ. ಅದರಲ್ಲಿನ ಪ್ರತಿವಾದಿ 1 ರಿಂದ 3 ರವರು ಈ ದಾವೆಯಲ್ಲಿನ ಪ್ರತಿವಾದಿ 1 ರಿಂದ 3 ಆಗಿರುತ್ತಾರೆ ಎಂದರೆ ಸರಿ. ಈ ದಾವೆಗೆ ಸಂಬಂಧಿಸಿದಂತೆ ಹಿರಿಯ ಸಿವಿಲ್ ನ್ಯಾಯಾಲಯ ಹಳಿಯಾಳದಲ್ಲಿ ಎಮ್ ಎ ಚಾಲ್ತಿಯಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದರಲ್ಲಿ 4 ನೇ ಎದುರುದಾರರು ಆಗಿರುತ್ತೀರಿ ಎಂದರೆ ಸರಿ. ಸರ್ವೇ ನಂಬರ 139 ರ ಹಿಸ್ಸಾ 2 ಅ 1 ರಲ್ಲಿ ಒಟ್ಟು 18 ಗುಂಟೆ 8 ಆಣೆ ಇತ್ತು ಎಂದರೆ ಸರಿ. ಅದರ ಪೈಕಿ 5 ಗುಂಟೆ 8 ಆಣೆ ಖರೀದಿಸಿರುತ್ತೀರಿ ಎಂದರೆ ಸರಿ. ಉಳಿದ 13 ಗುಂಟೆ ಅಡಿವೆಪ್ಪ ಮತ್ತು ಬಾಳವ್ವ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಉಳಿದ 13 ಗುಂಟೆಯನ್ನು ವಾದಿ ಆ ನಂತರ ಖರೀದಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೇ ನಂಬರ 139 ರ ಹಿಸ್ಸಾ 2 ಅ 1 ರಲ್ಲಿ ಒಟ್ಟು

18 ಗುಂಟೆ 8 ಆಣೆ ಮೊದಲು ಅಡಿವೆಪ್ಪನವರ ತಂದೆ ಮತ್ತು ಬಾಳವ್ವನ ಗಂಡನಾದ ಮುಕಾರ್ಯ ವಡ್ಡರ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ  ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.